ANNEXURE-II

Statement Showing the Royalty realised for the period from 1980-81 to 1995-96 (Rs. in Lakhs)

Sl.No.	District	Royalty Realised
1.	Bangalore	3815.13
2.	Bellary	6753.40
3.	Kolar	235.03
4.	Tumkur	1273.42
5.	Shimoga	195.49
6.	Chikmagalur	345.28
7.	Chitradurga	398.96
8.	Mysore	1386.58
9.	Mandya	59.29
10.	Hassan	229.41
11.	Coorg	5.51
12.	South Kanara	1085.47
13.	Raichur	1093.84
14.	Bidar	64.19
15.	Gulbarga	9397.99
16.	Dharwar	290.30
17.	Belgaum	667.57
18.	Bijapur	2781.00
19.	North Kanara	330.26
20.	P.W.D (whole state)	2981.29
	Total	33389.41

ವಿಷಯ:- ರೇಷ್ಮೆ ಇಲಾಖೆಯಲ್ಲಿ ವಿದೇಶಕ್ಕೆ ತೆರಳಿ ಬಂದ ಅಧಿಕಾರಿಗಳ ವಿವರ

1366 (1339) ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರೇಷ್ಮೆ ಇಲಾಖೆಯಲ್ಲಿ ಚೈನಾ ಮತ್ತು ಜಪಾನ್ ದೇಶಗಳಿಗೆ ತರಬೇತಿಗೆಂದು ಹೋಗಿ ಬಂದಿರುವ ಅಧಿಕಾರಿಗಳ ಸಂಖ್ಯೆ ಎಷ್ಟು?

ಆ) ಹಾಗಿದ್ದಲ್ಲಿ ಪ್ರತಿ ಅಧಿಕಾರಿಗೆ ತರಬೇತಿಗಾಗಿ ತಗಲಿರುವ ವೆಚ್ಚವೆಷ್ಟು?

ಇ) ತರಬೇತಿ ಪಡೆದ ಅಧಿಕಾರಿಗಳಿಂದ ಇಲಾಖೆಗೆ ಆದ ಪ್ರಯೋಜನಗಳೇನು?

ಶ್ರೀ ಎಂ. ವರದೇಗೌಡ (ರೇಷ್ಮೆ ರಾಜ್ಯ ಸಚಿವರು):-

ಅ) 109

ಆ) ಕರ್ನಾಟಕ ರೇಷ್ಮೆ ಯೋಜನೆಯಡಿಯಲ್ಲಿ ಜಪಾನ್ ದೇಶಕ್ಕೆ ಹೋಗಿ ಬಂದ ಪ್ರತಿ ಅಧಿಕಾರಿಗೆ ಆಗಿರುವ ವೆಚ್ಚ ರೂ. 84,305-00ಗಳು. ಚೈನಾ ದೇಶದ ಬಗ್ಗಿನ ವೆಚ್ಚವನ್ನು ಕೇಂದ್ರ ರೇಷ್ಮೆ ಮಂಡಳಿ ಭರಿಸುತ್ತದೆ.

ಇ) ರೇಷ್ಮೆ ಉತ್ಪಾದನೆಯಲ್ಲಿ ಪ್ರಗತಿಯಾಗಿದೆ.

ವಿಷಯ:- ನೂಲುಬಿಚ್ಚುವ ಕಾರ್ಖಾನೆಗಳಲ್ಲಿ ತಾಮ್ರ ಬೇಸಿನ್‌ಗಳ ಖರೀದಿ.

1367 (1338) ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ):- ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರಿ ಒಡೆತನದ ನೂಲು ಬಿಚ್ಚುವ ಕಾರ್ಖಾನೆಗಳಲ್ಲಿ 1990ನೇ ಸಾಲಿನಿಂದ 1996ನೇ ಸಾಲಿನವರೆಗೆ ಎಷ್ಟು ತಾಮ್ರದ ಬೇಸಿನ್‌ಗಳನ್ನು ಖರೀದಿಸಲಾಗಿದೆ?

ಆ) ಪ್ರತಿ ಬೇಸಿನ್ ಖರೀದಿಯ ಬೆಲೆ ಎಷ್ಟು?

ಇ) ಖರೀದಿಸಿದ್ದಕ್ಕೂ ಮತ್ತು ಬೇಸಿನ್ ತಯಾರಿಸಲು ಉಪಯೋಗಿಸಿದ ತಾಮ್ರದ ಬೆಲೆಗೂ ಬಹಳ ವ್ಯತ್ಯಾಸವಿದ್ದು ಭಾರಿ ಪ್ರಮಾಣದ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ತಪ್ಪಿತಸ್ಥರ ವಿರುದ್ಧ ಕೈಗೊಂಡ ಕ್ರಮವೇನು?

ಶ್ರೀ ಎಂ. ವರದೇಗೌಡ (ರೇಷ್ಮೆ ರಾಜ್ಯ ಸಚಿವರು.):-

ಅ) 200

ಆ) ರೂ. 5,960-00

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ವಿಷಯ:- ಧಾರವಾಡದಲ್ಲಿ ಕೈಗಾರಿಕಾ ಕೇಂದ್ರದ ಅಭಿವೃದ್ಧಿ.

1369 (2016) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿಗ್ರಾಮಾಂತರ):- ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಸಂಪನ್ಮೂಲಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಬೆಳವಣಿಗೆ ಕೇಂದ್ರದಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದ ಹೆಚ್ಚಿನ ಪ್ರಮಾಣದಲ್ಲಿ ಕೈಗಾರಿಕೆಗಳು ಬೆಳೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಸದರಿ ಬೆಳವಣಿಗೆ ಕೇಂದ್ರವನ್ನು ಬಲಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?